# ಯುವ ವೇದಿಕೆ

## ವ್ಯಕ್ತಿತ್ವದ ಬೆಳವಣಿಗೆ - ೪

### ಅರ್ಥಪೂರ್ಣ ಜೀವನ

ಈ ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಅರ್ಥವಿದೆ. ಅತ್ಯಂತ ಕ್ಷುದ್ರವಾದ ವಸ್ತುವೂ ಯಾವುದಾದರೊಂದು ಸಂದರ್ಭದಲ್ಲಿ ಯಾವುದಾದರೊಂದು ರೀತಿಯಲ್ಲಿ ಉಪಯುಕ್ತವಾಗುತ್ತದೆ ಮತ್ತು ಅದರ ಮೂಲಕ ಅದು ತನ್ನ ಅರ್ಥವನ್ನು ಪಡೆಯುತ್ತದೆ. ನಾವು ಅಸಹ್ಯಪಡುವ ಹೇಸಿಗೆಯೂ ಗಿಡಕ್ಕೆ ಗೊಬ್ಬರವಾಗಿ ತನ್ನ ಸಾರ್ಥಕತೆಯನ್ನು ಪಡೆಯುತ್ತದೆ. ಆದ್ದರಿಂದ ಈ ಪ್ರಪಂಚದಲ್ಲಿ ಯಾವುದೂ ನಿರರ್ಥಕವಲ್ಲ. ಒಂದು ನಿರ್ಜೀವ ವಸ್ತು ನಿರರ್ಥಕವಾದರೂ ಅದಕ್ಕೇನೂ ನಷ್ಟವಿಲ್ಲ, ವ್ಯಥೆಯೂ ಇಲ್ಲ, ಕಾರಣ ಅದಕ್ಕೆ ತನ್ನತನವಿಲ್ಲ—'ನಾನು' ಎಂಬ ಪ್ರಜ್ಞೆ ಇಲ್ಲ. ಆದರೆ ಪ್ರಜ್ಞಾವಂತ ಮಾನವನಿಗೆ ಈ ಅರ್ಥಹೀನತೆ ತುಂಬ ದುಃಖದಾಯಕವಾಗುತ್ತದೆ, ವ್ಯಕ್ತಿಯ ಬೆಳವಣಿಗೆಯನ್ನು ಕುಂಠಿಸುತ್ತದೆ. ಜೀವನ ಅರ್ಥಪೂರ್ಣವೆನಿಸಿದಾಗ ಅದು ಸಹ್ಯವಾಗುತ್ತದೆ, ಇಲ್ಲದಿದ್ದರೆ ಅದೊಂದು ಹೊರೆಯಾಗುತ್ತದೆ.

ಮನಶ್ಶಾಸ್ತ್ರಜ್ಞರ ಪ್ರಕಾರ ಜೀವನದ ಅರ್ಥಹೀನತೆಯು ಮೂರು ಬಗೆಯ ಮಾನಸಿಕ ವ್ಯಾಧಿಗಳಿಗೆ ಕಾರಣವಾಗುತ್ತದೆ : **ದುಗುಡ** (*depression*), **ಹಿಂಸಾಪ್ರವೃತ್ತಿ** (*aggression*) ಮತ್ತು ದುರ್ವ್ಯಸನ (*addiction*). ವ್ಯಕ್ತಿಗೆ ತನ್ನ ಜೀವನವು ತನಗಾಗಲಿ ಇತರರಿಗಾಗಲಿ ನಿರರ್ಥಕವೆನಿಸಿದಾಗ ನಿರುತ್ಸಾಹ ಅವನನ್ನು ಆವರಿಸುತ್ತದೆ. ಯಾವುದೇ ರಚನಾತ್ಮಕ ಚಟುವಟಿಕೆಗಳಲ್ಲಿಯೂ ತನ್ನನ್ನು ತೊಡಗಿಸಿಕೊಳ್ಳಲಾರದವನಾಗುತ್ತಾನೆ. ಈ ದುಗುಡತೆಯಿಂದಾಗಿ ಅವನು ತನ್ನನ್ನು ತಾನೇ ದ್ವೇಷಿಸತೊಡಗುತ್ತಾನೆ. ಇದು ಅತಿರೇಕಕ್ಕೆ ಹೋದಾಗ ಅವನು ಆತ್ಮಹತ್ಯೆಯನ್ನೂ ಮಾಡಿಕೊಳ್ಳಬಹುದು.

ಜೀವನ ಅರ್ಥಹೀನವಾದಾಗ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಮೌಲ್ಯವಿಲ್ಲದುದನ್ನು ವ್ಯರ್ಥಗೊಳಿಸುವುದು ಸ್ವಾಭಾವಿಕ. ಕಾಡುಹರಟೆ, ವ್ಯರ್ಥ ಅಲೆದಾಟ, ದುರ್ವ್ಯಸನ (ಮದ್ಯಸೇವನೆ ಇತ್ಯಾದಿ) ಮುಂತಾದುವುಗಳ ಮೂಲಕ ವ್ಯಕ್ತಿಯು ತನ್ನ ಜೀವನವನ್ನು ವ್ಯರ್ಥಗೊಳಿಸುತ್ತಾನೆ. ತನ್ನ ಜೀವನಕ್ಕೆ ಮೌಲ್ಯವನ್ನು ನೀಡದವನು ಇತರರ ಜೀವನಕ್ಕೂ ಮೌಲ್ಯವನ್ನು ನೀಡುವುದಿಲ್ಲ. ಇದರ ಪರಿಣಾಮವೇ ಹಿಂಸಾತ್ಮಕ ಕೃತ್ಯಗಳು—ಭಯೋತ್ಪಾದನೆ ಮುಂತಾದುವುಗಳು.

ಪ್ರತಿಯೊಬ್ಬರೂ ತಮ್ಮ ಜೀವನ ಅರ್ಥಪೂರ್ಣವಾಗಿರಬೇಕೆಂದು ಬಯಸುತ್ತಾರೆ. ಈ ಬಯಕೆ ಬೇರೆ ಬಯಕೆಗಳಿಗಿಂತಲೂ ತೀವ್ರವಾದುದೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ—ಸುಖ, ಕೀರ್ತಿ, ಅಧಿಕಾರ ಇತ್ಯಾದಿ ಬಯಕೆಗಳಿಗಿಂತಲೂ ಅದು ತೀವ್ರವಾದುದಂತೆ. 'ಅರ್ಥೇಚ್ಛೆ ಎಂಬುದು ಒಂದು ನಿರ್ದಿಷ್ಟವಾದ ಅವಶ್ಯಕತೆ. ಅದನ್ನು ಬೇರೆ ಅವಶ್ಯಕತೆಗಳಿಂದ ತುಂಬಲಾಗುವುದಿಲ್ಲ. ಅದು ಎಲ್ಲ ವ್ಯಕ್ತಿಗಳಲ್ಲಿಯೂ ಒಂದಲ್ಲ ಒಂದು ಪ್ರಮಾಣದಲ್ಲಿ ಇದ್ದೇ ಇರುತ್ತದೆ,' (Viktor E. Frankl, *The Unconscious God*, P.79). ಅರ್ಥಹೀನತೆಯ, ಶೂನ್ಯತೆಯ ಭಾವ ವ್ಯಕ್ತಿಯ ಅಂತರ್ಯವನ್ನು ಆವರಿಸಿಕೊಂಡಿರುವಾಗ ಬೇರೆ ಯಾವ ಸುಖವನ್ನೂ ಅನುಭವಿಸಲಾಗುವುದಿಲ್ಲ. ಜೀವನ ಅರ್ಥಪೂರ್ಣವಾದಾಗ ಅದಕ್ಕೆ ಸಂಬಂಧಪಟ್ಟ ಎಲ್ಲವೂ ಅರ್ಥಪೂರ್ಣವಾಗುತ್ತವೆ—ದುಃಖವೂ



ನೀಷೇ

ಅರ್ಥಪೂರ್ಣವಾಗಿ ಸಹ್ಯವಾಗುತ್ತದೆ. 'ಜೀವನ ಏಕೆ ಎನ್ನುವುದು ನಿರ್ಧಾರಿತವಾದಾಗ ಅದು ಹೇಗೋ ನಡೆಯುತ್ತದೆ' ಎನ್ನುತ್ತಾನೆ ಪಾಶ್ಚಾತ್ಯ ತತ್ತ್ವಜ್ಞಾನಿ ನೀಷೇ.

**ಎಲ್ಲವನ್ನೂ ಸಾರ್ಥಕಗೊಳಿಸುವ ವ್ಯಕ್ತಿಜೀವನವೇ ನಿಃಸಾರ್ಥಕವಾದರೆ, ಅವನ ಪಾಲಿಗೆ ಎಲ್ಲವೂ ನಿಃಸಾರ್ಥಕವಾಗುತ್ತದೆ.**

## ಜೀವನಕ್ಕೆ ಅರ್ಥವನ್ನು ನೀಡುವುದು ಯಾವುದು!

ತಂದೆತಾಯಿಯರು ಮಕ್ಕಳ ಮೂಲಕ ತಮ್ಮ ಜೀವನಕ್ಕೆ ಅರ್ಥವನ್ನು ಪಡೆಯುತ್ತಾರೆ. ಮಕ್ಕಳನ್ನು ಲಾಲಿಸಿ, ಪಾಲಿಸಿ, ಅವರನ್ನು ದೊಡ್ಡವರನ್ನಾಗಿ ಮಾಡುವ ಜವಾಬ್ದಾರಿ ಅವರ ಜೀವನಕ್ಕೆ ಅರ್ಥವನ್ನು ನೀಡುತ್ತದೆ. ಮಕ್ಕಳು ದೊಡ್ಡವರಾಗಿ ತಂದೆತಾಯಿಯರ ಆಶ್ರಯ ಅವರಿಗೆ ಬೇಡವಾದಾಗ ಮತ್ತು ಅವರನ್ನು ಕಡೆಗಣಿಸಿದಾಗ ಮತ್ತೆ ಅವರ ಜೀವನ ಅರ್ಥವನ್ನು ಕಳೆದುಕೊಳ್ಳುತ್ತದೆ. ಅಸ್ಥಿರವಾದ ಹಣ, ಸ್ಥಾನ, ಮಾನ, ಅಧಿಕಾರಾದಿಗಳೂ ಕೂಡ ಜೀವನಕ್ಕೆ ನಿರ್ದಿಷ್ಟವಾದ ಅರ್ಥವನ್ನು ನೀಡಲಾರವು. ಒಬ್ಬ ಸಂಗೀತಗಾರನು ಸಂಗೀತದಲ್ಲಿ ತನ್ನ ಜೀವನದ ಅರ್ಥವನ್ನು ಕಂಡುಕೊಳ್ಳಬಹುದು. ಪಂಡಿತನು ಜ್ಞಾನಾರ್ಜನೆಯಲ್ಲಿ ತನ್ನ ಜೀವನದ ಅರ್ಥವನ್ನು ಕಂಡುಕೊಳ್ಳಬಹುದು. ಆದರೆ ವಯಸ್ಸಾದಂತೆ ಧ್ವನಿ ಕ್ಷೀಣಿಸುತ್ತದೆ, ನೆನಪಿನ ಶಕ್ತಿ ಹೊರಟುಹೋಗುತ್ತದೆ. ಆಗ ಸಂಗೀತವಾಗಲಿ ಪಾಂಡಿತ್ಯವಾಗಲಿ ಅವನ ಜೀವನಕ್ಕೆ ಅರ್ಥವನ್ನು ನೀಡಲಾರದು. ಜೀವನವೆನ್ನುವುದು ಇವೆಲ್ಲಕ್ಕಿಂತಲೂ ಹೆಚ್ಚು ಮೌಲ್ಯವುಳ್ಳದ್ದು. ಜೀವನವೇ ಇವೆಲ್ಲಕ್ಕೂ ಮೌಲ್ಯವನ್ನೂ ಅರ್ಥವನ್ನೂ ನೀಡುವಂತಹುದು. ಅವುಗಳಿಂದ ಜೀವನ ಅರ್ಥವನ್ನು ಪಡೆಯುವಂತಾಗಬಾರದು. ಮರ ಇರುವುದರಿಂದ ಕೊಂಬೆ ಎಲೆ ಮುಂತಾದುವುಗಳು ಅರ್ಥವನ್ನು ಪಡೆಯುತ್ತವೆ. ಮರಕ್ಕಾಗಿ ಇವುಗಳಿವೆಯೇ ಹೊರತು ಇವುಗಳಿಗಾಗಿ ಮರ ಇರುವುದಲ್ಲ. ಹಾಗೆಯೇ ಮಾನವ ಜೀವನದಿಂದ ಇತರ ವಿಷಯಗಳು ಅರ್ಥವನ್ನು ಪಡೆಯುವಂತಾಗಬೇಕೇ ಹೊರತು ಅವುಗಳಿಂದ ಜೀವನ ಅರ್ಥವನ್ನು ಪಡೆಯುವಂತಾಗಬಾರದು.

**ಇತರರೊಡನೆ ನಿರಂತರ ಭಾವವಿನಿಮಯದಿಂದ ಮಾತ್ರವೇ ವ್ಯಕ್ತಿಯು ವ್ಯಕ್ತಿಯಾಗಿ ಉಳಿಯುತ್ತಾನೆ.**

—ಪಾಲ್ ತಿಲಿಚ್

ಇಂತಹ ಮೌಲ್ಯವಂತ ಜೀವನ ಇದಕ್ಕಿಂತಲೂ ಹೆಚ್ಚು ಮೌಲ್ಯವುಳ್ಳ ವಸ್ತುವಿನಿಂದ ಅರ್ಥವನ್ನು ಪಡೆಯಬಹುದು. ಅಂತಹ ವಸ್ತು ಯಾವುದು? ನಾವು ಹಿಂದೆಯೇ ಚರ್ಚಿಸಿರುವಂತೆ ವ್ಯಕ್ತಿತ್ವದ ಅಂತರಾಳದಲ್ಲಿ ಆಧ್ಯಾತ್ಮಿಕ ಅಂಶವಿದೆ. ಅದೇ ವ್ಯಕ್ತಿತ್ವದ ಸಾರಸರ್ವಸ್ವ. ಅದು ಶಾಶ್ವತವಾಗಿ ಜೀವನದೊಂದಿಗೆ ಇರುವಂತಹುದು. ಅದನ್ನು ಹೊರತು ಜೀವನವೇ ಇಲ್ಲ. ಈ ಆಧ್ಯಾತ್ಮಿಕತೆ ಮತ್ತು ಅದರ ಅನ್ವೇಷಣೆ ಮಾತ್ರ ಜೀವನವನ್ನು ಅರ್ಥಪೂರ್ಣಗೊಳಿಸಬಲ್ಲದು. 'ನಿಮ್ಮಲ್ಲಿರುವ ದೈವತ್ವವನ್ನು ಪ್ರಕಟಗೊಳಿಸಿ. ಪ್ರತಿಯೊಂದೂ ತಾನಾಗಿ ಅದರ ಸುತ್ತಲೂ ಸಾಮರಸ್ಯದಿಂದ ಅಣಿಯಾಗುವುದು,' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

## ಸಮಾಜದೊಡನೆ ಅರ್ಥಪೂರ್ಣ ಸಂಬಂಧ

ವ್ಯಕ್ತಿತ್ವದ ಬೆಳವಣಿಗೆಗೆ ಸಂಬಂಧಿಸಿದಂತೆ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ ಸಮಾಜದೊಡನೆ ಇರಬೇಕಾದ ಸಂಬಂಧ. ಯಾವನೂ ಸಂಪೂರ್ಣ ಏಕಾಂಗಿಯಾಗಿರಲಾರ. ವ್ಯಕ್ತಿಯ ಜೀವನ ಭೌತಿಕ, ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ —ಈ ಎಲ್ಲ ಹಂತಗಳಲ್ಲೂ ಸಮಾಜದೊಡನೆ ಸಂಪರ್ಕವನ್ನು ಹೊಂದಿದೆ. ಸಮಾಜವೆನ್ನುವುದು ಕೇವಲ ವಿವಿಧ ವ್ಯಕ್ತಿಗಳ ಗುಂಪಲ್ಲ, ಅದೊಂದು ಸಾಂಸ್ಕೃತಿಕ ಸಂಸ್ಥೆ. ಅದಕ್ಕೆ ಸಂಸ್ಕೃತಿಯನ್ನು ನೀಡುವವನು ವ್ಯಕ್ತಿ. ತನ್ನ ಸಾಮರ್ಥ್ಯವನ್ನೂ ಪ್ರತಿಭೆಯನ್ನೂ ಒಳ್ಳೆಯ ಅಥವಾ ಕೆಟ್ಟತನವನ್ನೂ ಹೊರಗೆ ವ್ಯಕ್ತಪಡಿಸುವುದರ ಮೂಲಕ ಅವನು ಸಮಾಜದ ಸಂಸ್ಕೃತಿಯನ್ನು ರೂಪಿಸುತ್ತಾನೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಆತ್ಮವು ತನ್ನನ್ನು ತಾನು ಅಭಿವ್ಯಕ್ತಿಗೊಳಿಸುತ್ತಿರುವುದು. ಈ ಜಗತ್ತಿನಲ್ಲಿ ಕಾಣುವ ಎಲ್ಲ ಸಮಾಜಗಳು ಮತ್ತು ಸಾಮಾಜಿಕ ವ್ಯವಸ್ಥೆಗಳು ಈ ಅಭಿವ್ಯಕ್ತಿಯ ವಿವಿಧ ರೂಪಗಳು ಮತ್ತು ಹಂತಗಳು.' ಹಾಗೆಯೇ ಮನುಷ್ಯನೂ ಕೂಡ ಸಮಾಜದ ಸಂಸ್ಕೃತಿಯನ್ನು ಹೀರಿಕೊಂಡು ಬೆಳೆಯುತ್ತಾನೆ. ಅವನು ಸಮಾಜದ ಸೃಷ್ಟಿಯೂ ಹೌದು ಮತ್ತು ಅದರ ಸೃಷ್ಟಿಕರ್ತನೂ ಹೌದು. ಆದ್ದರಿಂದ ಅವನ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಸಮಾಜದೊಡನಿರುವ ಅವನ ಸಂಬಂಧ ಅತಿ ಮುಖ್ಯವಾದ ಅಂಶ. ಎರಿಕ್ ಫ್ರೋಮ್ ಹೇಳುವಂತೆ, 'ಜೀವನ ಪ್ರಕ್ರಿಯೆಯು ಹೊರಜಗತ್ತಿನೊಂದಿಗೆ ಎರಡು ಬಗೆಯ ಸಂಬಂಧವನ್ನು ಸೂಚಿಸುತ್ತದೆ ; ಒಂದು ಹೊರಗಿನಿಂದ ಒಳಗೆ ಹೀರಿಕೊಳ್ಳುವುದು ಮತ್ತೊಂದು ಒಳಗಿನಿಂದ ಹೊರಗೆ ವ್ಯಕ್ತಗೊಳಿಸುವುದು,' (*Man for Himself*, P.113).



ಎರಿಕ್ ಫ್ರೋಮ್

## ಸಮಾಜದೊಡನೆ ಪ್ರೀತಿಯ ಸಂಬಂಧ

ಸಮಾಜದೊಡನೆ ನಾವು ಅನೇಕ ರೀತಿಯ ಸಂಬಂಧವನ್ನು ಹೊಂದಿರಬಹುದು. ಒಬ್ಬ ಕಳ್ಳನೂ ವಂಚಕನೂ ಸಮಾಜದೊಂದಿಗೆ ಒಂದು ರೀತಿಯ ಸಂಬಂಧವನ್ನು ಹೊಂದಿರುತ್ತಾನೆ. ಆದರೆ ಇದು ನಿಷೇಧಾತ್ಮಕವಾದುದು. ಇದರಿಂದ ವ್ಯಕ್ತಿಯೂ ಬೆಳೆಯುವುದಿಲ್ಲ, ಸಮಾಜಕ್ಕೂ ಹಾನಿ. ವ್ಯಕ್ತಿಯು ಸಮಾಜದೊಡನೆ ಪ್ರೀತಿಪೂರ್ವಕವಾದ ಸಂಬಂಧವನ್ನು ಹೊಂದಿರಬೇಕು. ಇದಕ್ಕೆ ವ್ಯಕ್ತಿಯು ಮೊದಲು ತನ್ನನ್ನು ತಾನು ಪ್ರೀತಿಸಬೇಕು. ಶ್ರೇಷ್ಠ ಮನಶ್ಶಾಸ್ತ್ರಜ್ಞರಾದ

ಹೊವಾರ್ಡ್ ವ್ಹಿಟ್‌ಮನ್ ಹೇಳುತ್ತಾರೆ: '**ನಾವು ಇತರರನ್ನು ಪ್ರೀತಿಸಬೇಕೆಂದು ಬಯಸುವುದಾದರೆ ನಮ್ಮನ್ನು ನಾವು ಪ್ರೀತಿಸಬೇಕು. ನಾವು ಎಷ್ಟರಮಟ್ಟಿಗೆ ನಮ್ಮನ್ನೂ ಇತರರನ್ನೂ ದ್ವೇಷಿಸುತ್ತೇವೆಯೊ ಅಷ್ಟರ ಮಟ್ಟಿಗೆ ಭಾವನಾತ್ಮಕವಾಗಿ ನಾವು ರೋಗಿಗಳು ಮತ್ತು ನಮ್ಮ ಪ್ರೀತಿಯ ಸಾಮರ್ಥ್ಯವೂ ಕುಂಠಿತವಾಗುತ್ತದೆ.**' ನಮ್ಮನ್ನು ನಾವು ಪ್ರೀತಿಸುವುದೆಂದರೆ ಸ್ವಾರ್ಥವಲ್ಲ, ದುರಹಂಕಾರವೂ ಅಲ್ಲ. ನಮ್ಮ ಬಗ್ಗೆ ಒಂದು ಘನತೆಯ ಮತ್ತು ಸಾರ್ಥಕತೆಯ ಭಾವ ಇರಬೇಕು ಮತ್ತು ನಮ್ರತೆಯೂ ಇರಬೇಕು. ಸ್ವಾಮಿ ವಿವೇಕಾನಂದರು ಹೇಳುವಂತೆ, '**ಪೂರ್ಣ ನಮ್ರತೆಯೊಡನೆ ರಾಜನಂತಿರಬೇಕು**' (*Be a king with all humility*).

ಆಂತರಿಕ ಪರಿಪೂರ್ಣತೆಯಿಂದ, ಸುಖಭಾವದಿಂದ ಹೊರಹೊಮ್ಮಿದ ಪ್ರೀತಿ ಪರಿಶುದ್ಧವಾಗಿರುತ್ತದೆ. ಆ ಪ್ರೀತಿಯ ಹಿಂದೆ **ಒಡೆತನದ ಭಾವ** (*sense of possession*) ಇರುವುದಿಲ್ಲ. ನಾನು ಪ್ರೀತಿಸುವ ವ್ಯಕ್ತಿ ನನ್ನ ವಶವರ್ತಿಯಾಗಿರಬೇಕೆಂಬ ಹುಂಬತನವಿರುವುದಿಲ್ಲ. ಆಂತರಿಕ ಕೊರತೆಯನ್ನು ಅನುಭವಿಸುವವನಲ್ಲಿ ಮಾತ್ರ ಈ ದೌರ್ಬಲ್ಯವಿರುತ್ತದೆ. ಅವನು ತಾನು ಪ್ರೀತಿಸುವ ವ್ಯಕ್ತಿ ತನ್ನ ಸ್ವಂತದವನಾಗಿರಬೇಕು, ತನ್ನ ಆದರ್ಶಾನುಸಾರವಾಗಿ ಅವನು ಬೆಳೆಯಬೇಕು ಎಂದು ಆಸೆ ಪಡುತ್ತಾನೆ. ಅವನು ತಾನು ಪ್ರೀತಿಸುವ ವ್ಯಕ್ತಿಗೆ ಅವನ ಬೆಳವಣಿಗೆಯ ನಿಯಮಕ್ಕೆ ಅನುಸಾರವಾಗಿ, ಅವನ ಆದರ್ಶಕ್ಕನುಸಾರವಾಗಿ ಬೆಳೆಯುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ. ಆಂತರಿಕ ಸಂತೃಪ್ತಿಯುಳ್ಳವನ ಪ್ರೀತಿಯಲ್ಲಿ ಈ ಒಡೆತನದ ಭಾವವಿರುವುದಿಲ್ಲ. ಇದು ನಿಜವಾದ ಪ್ರೀತಿ. ಸಮಾಜದೊಡನಿರುವ ನಮ್ಮ ಸಂಬಂಧ ಈ ನೈಜ ಪ್ರೀತಿಯನ್ನು ಆಧರಿಸಿರಬೇಕು.

## ಕೊಡು-ಕೊಳ್ಳುವ ಭಾವ

ಸಮಾಜದೊಡನೆ ಅರ್ಥಪೂರ್ಣ ಸಂಬಂಧ ಕೊಡು-ಕೊಳ್ಳುವ ಭಾವವನ್ನು ಅವಲಂಬಿಸಿರುತ್ತದೆ. ಜೀವನ ಒಂದು ನದಿಯಂತಿರಬೇಕು. ನದಿಯಲ್ಲಿ ನೀರು ಒಂದು ಹೋಗುತ್ತಿರುವಂತೆ ಜೀವನವೂ ಹರಿಯುತ್ತಿರಬೇಕು, ಅದು ನಿಂತ ನೀರಾಗಬಾರದು. ಸ್ವೀಕರಿಸುವುದು ಮತ್ತು ನೀಡುವುದು ನಿರಂತರವಾಗಿ ನಡೆಯುತ್ತಿರಬೇಕು. ಜಾನ್ ಸಿ. ಕಾರ್ನಿಲಿಯಸ್ ಹೇಳುವಂತೆ, '**ನೀಡುವುದೂ ಒಂದು ಆತ್ಮ-ಸಫಲತೆ ಎಂಬ ಅಂಶವನ್ನು ನಾವು ಕಡೆಗಣಿಸುವ ತಪ್ಪನ್ನು ಮಾಡುತ್ತೇವೆ.**' ಒಂದು ವರ್ಗದವರು ಕೇವಲ ನೀಡುವುದು, ಮತ್ತೊಂದು ವರ್ಗದವರು ಕೇವಲ ಸ್ವೀಕರಿಸುವುದು—ಹೀಗಾದರೆ ಅಂತಹ ಸಮಾಜ ಆರೋಗ್ಯವಂತವಾಗಿರುವುದಿಲ್ಲ. ಪೌಷ್ಟಿಕತೆಯೆಲ್ಲ ದೇಹದ ಯಾವುದೊ ಒಂದು ಅಂಗದಲ್ಲಿ ಸೇರಿಕೊಂಡು ಅದೊಂದು ಮಾತ್ರ ಅತಿಯಾಗಿ ಬೆಳೆದರೆ ಅದೊಂದು ಅಸ್ವಾಭಾವಿಕ ಸ್ಥಿತಿ—ಆಗ ದೇಹ ಸರಿಯಾಗಿ ಕೆಲಸ ಮಾಡಲಾಗುವುದಿಲ್ಲ. ಇದು ಸಮಾಜಕ್ಕೂ ಅನ್ವಯಿಸುತ್ತದೆ. ಕೊಟ್ಟು-ಕೊಳ್ಳುವುದು ಎಲ್ಲ ವಿಷಯಗಳಲ್ಲಿಯೂ ಎಲ್ಲ ವರ್ಗಗಳಲ್ಲಿಯೂ ನಡೆಯುತ್ತಿದ್ದರೆ ಆಗ ಸಮಾಜ ಸಮತೋಲದಿಂದ ಕೂಡಿರುತ್ತದೆ.

ಒಂದು ಸೇಬಿನ ಮರವಿತ್ತು. ಕಡು ಬಡವನೊಬ್ಬನು ಅದರ ಹತ್ತಿರ ಹೋಗಿ ಸಹಾಯ ಕೋರಿದನು. ತನ್ನಲ್ಲಿರುವ ಹಣ್ಣುಗಳನ್ನೆಲ್ಲ ತೆಗೆದುಕೊಂಡು ಹೋಗಿ ಮಾರು—ಎಂದಿತು ಮರ. ಬಡವನು ಹಾಗೇ

> **ಇತರರ ಹಿತವನ್ನು ಆವಶ್ಯಕವಾಗಿ ಪರಿಗಣಿಸದೆ ಸ್ವಹಿತವನ್ನು ಸಾಧಿಸಲಾಗುವುದಿಲ್ಲ.**
>
> —ಎಪಿಕ್ಟಟಿಸ್

ಮಾಡಿದ. ಬಂದ ಹಣವೆಲ್ಲ ಖರ್ಚಾದ ಮೇಲೆ ಅವನು ಮತ್ತೆ ಮರದ ಹತ್ತಿರ ಸಹಾಯಕ್ಕಾಗಿ ಬಂದನು. ನನ್ನ ರೆಂಬೆಗಳನ್ನೆಲ್ಲ ಕತ್ತರಿಸಿಕೊಂಡುಹೋಗು, ಎಂದಿತು ಮರ. ಆ ಲೋಭಿ ಬಡವ ಎಲ್ಲ ರೆಂಬೆಗಳನ್ನೂ ಕತ್ತರಿಸಿಕೊಂಡು ಹೋಗಿ ಕಟ್ಟಿಗೆಯಾಗಿ ಮಾರಿದ. ಅದರಿಂದ ಬಂದ ಹಣದಲ್ಲಿ ಕೆಲವು ಕಾಲ ನೆಮ್ಮದಿಯಿಂದಿದ್ದ. ಅನಂತರ ಹಣ ಮುಗಿದಮೇಲೆ ಮತ್ತೆ ಬಂದು ಮರವನ್ನು ಬೇಡಿದನು. ನನ್ನ ಕಾಂಡವನ್ನು ಕತ್ತರಿಸಿಕೊಂಡು ಹೋಗೆಂದು ಮರ ಹೇಳಿತು. ಅವನು ನಿಃಸಂಕೋಚದಿಂದ ಬುಡಸಮೇತ ಮರದ ಕಾಂಡವನ್ನು ಕತ್ತರಿಸಿಕೊಂಡು ಹೋದನು. ಅದರಿಂದ ಅವನಿಗೆ ತುಂಬ ಹಣ ಸಿಕ್ಕಿತು. ಕೆಲವು ತಿಂಗಳುಗಳಾದ ಮೇಲೆ ಆ ಹಣವೂ ಖರ್ಚಾಯಿತು. ಮತ್ತೆ ಆತ ಮರದ ಹತ್ತಿರ ಬಂದು ಕೈ ನೀಡಿದ. ಈಗ ಮರದ ಹತ್ತಿರ ಕೊಡುವುದಕ್ಕೆ ಏನೂ ಇಲ್ಲ. 'ನನ್ನ ಈ ಮೋಟುಮರದ ಮೇಲೆ ಕುಳಿತು ಸ್ವಲ್ಪ ವಿಶ್ರಾಂತಿ ಪಡೆದುಕೊಂಡು ಹೋಗು' ಎಂದಿತು ಆ ಮರ. ಈ ಮರದಂತೆ ನೀಡುವುದರಿಂದಾಗಲಿ, ಆ ಬಡ ವ್ಯಕ್ತಿಯಂತೆ ಕೇವಲ ಸ್ವೀಕರಿಸುವುದರಿಂದಾಗಲಿ ಯಾರಿಗೂ ಯಾವ ಪ್ರಯೋಜನವೂ ಇಲ್ಲ. ಇದರಿಂದ ಸಮಾಜ ಕ್ಷೀಣಿಸುತ್ತ ಹೋಗುತ್ತದೆ. ಆದ್ದರಿಂದಲೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, '**ಪರಸ್ಪರ ಸಹಾಯದ ಮೂಲಕ ಪರಮ ಶ್ರೇಯಸ್ಸನ್ನು ಪಡೆಯಬೇಕು**' (**ಪರಸ್ಪರಂ ಭಾವಯಂತಃ ಶ್ರೇಯಃಪರಮವಾಪ್ಸ್ಯಥ**) ಎಂದಿರುವುದು.

## ಮೂಲ ಸಾಮಾಜಿಕ ಸಂಬಂಧ

ಸಮಾಜದೊಡನಿರುವ ನಮ್ಮ ಸಂಬಂಧ ನಾವೆಲ್ಲಿರುವೆವೊ ಅಲ್ಲಿಂದ ಪ್ರಾರಂಭವಾಗಬೇಕು. ನಾವು ಕುಟುಂಬದಲ್ಲಿದ್ದರೆ, ಅಥವಾ ಒಂದು ಸಂಸ್ಥೆಯಲ್ಲಿದ್ದರೆ, ಮೊದಲು ಕುಟುಂಬ ಅಥವಾ ಸಂಸ್ಥೆಯ ಇತರರೊಡನೆ ಒಂದು ಅರ್ಥಪೂರ್ಣ ಸಂಬಂಧವನ್ನು ಹೊಂದಿರಬೇಕು. ಮುಂದೆ ಹಂತ ಹಂತವಾಗಿ ನಮ್ಮ ಸಂಬಂಧದ ವಿಸ್ತರಣೆಯಾಗಬೇಕು. ನಾವು ನಮ್ಮ ಹತ್ತಿರದವರೊಡನೆಯೇ ಶಾಂತಿಯಿಂದ ಇರಲಾಗದಿದ್ದರೆ ಹೊರಗಿನ ಸಮಾಜದೊಡನೆ ನಮ್ಮ ಸಂಬಂಧ ಯಾಥಾರ್ಥವಾಗಿರಲಾರದು. ನಮ್ಮ ಹತ್ತಿರ ವಾಸಿಸುವವರು ನಮ್ಮನ್ನು ಎಷ್ಟು ಪ್ರೀತಿಸುತ್ತಾರೆ ಮತ್ತು ಗೌರವಿಸುತ್ತಾರೆ ಎನ್ನುವುದು ಹೊರಗೆ ಜನಪ್ರಿಯರಾಗಿರುವುದಕ್ಕಿಂತ ಬಹಳ ಮುಖ್ಯ. 'ಮನೆಗೆ ಮಾರಿ ಪರರಿಗೆ ಉಪಕಾರಿ'ಯಂತಿರಬಾರದು. ಆದ್ದರಿಂದ ಸಮಾಜದೊಡನೆ ನಮಗಿರುವ ಅರ್ಥಪೂರ್ಣ ಸಂಬಂಧ ನಾವಿರುವ ಕುಟುಂಬ ಅಥವಾ ಸಂಘದೊಡನೆ ಪ್ರಾರಂಭವಾಗುತ್ತದೆ.

## ಮುಕ್ತಾಯ

ವ್ಯಕ್ತಿತ್ವ ಹಲವು ಅಂಶಗಳಿಂದ ಕೂಡಿದೆ, ಅದರ ಹಲವು ಸ್ತರಗಳು, ಹಲವು ಅಂಶಗಳು ಅದರ ಮೇಲೆ ಪ್ರಭಾವ ಬೀರುತ್ತವೆ, ಹಲವು ರೀತಿಯಲ್ಲಿ ಅದು ಬಾಹ್ಯ ಜಗತ್ತಿನೊಂದಿಗೆ ಸಂಪರ್ಕ ಹೊಂದಿರುತ್ತದೆ. ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಈ ಎಲ್ಲ ಅಂಶಗಳನ್ನು ಪರಿಗಣಿಸುವುದು ಅತ್ಯಗತ್ಯ. ವ್ಯಕ್ತಿತ್ವದ ಎಲ್ಲ ಸ್ತರಗಳಲ್ಲೂ ಬೆಳವಣಿಗೆಯು ಏಕಕಾಲದಲ್ಲಿ ಮುಂದುವರಿಯಬೇಕು. ಆಗ ಸ್ವಾಮಿ ವಿವೇಕಾನಂದರ ಕಲ್ಪನೆಯ ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿದ ವ್ಯಕ್ತಿಯ ನಿರ್ಮಾಣ ಸಾಧ್ಯ:

'ಹೃದಯವಂತಿಕೆ, ವಿಚಾರಶಕ್ತಿ ಮತ್ತು ಕಾರ್ಯತತ್ಪರತೆ ಈ ಮೂರೂ ಒಂದೇ ಸಮವಾಗಿ ಯಾರಲ್ಲಿ ಪಕ್ವತೆಯನ್ನು ಹೊಂದಿದೆಯೋ ಅಂತಹ ವ್ಯಕ್ತಿಯನ್ನು ನೋಡಲು ನಾವು ಬಯಸುತ್ತೇವೆ. ಈ ಪ್ರಪಂಚದ ಕಷ್ಟ ದುಃಖಗಳನ್ನು ಹೃತ್ಪೂರ್ವಕವಾಗಿ ಅನುಭವಿಸಬಲ್ಲಂತಹ ವ್ಯಕ್ತಿ ನಮಗೆ ಬೇಕು. ಕೇವಲ ಇವುಗಳನ್ನು ಅನುಭವಿಸಬಲ್ಲಂತಹ ವ್ಯಕ್ತಿ ಮಾತ್ರವಲ್ಲ, ವಸ್ತುವಿನ ಅಂತರಾಳಕ್ಕೆ ಪ್ರವೇಶಿಸಿ, ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಂಥವನೂ ನಮಗೆ ಬೇಕು. ಅವನು ಇಲ್ಲಿಯೂ ನಿಲ್ಲಕೂಡದು. ತಾನು ಏನನ್ನು ಅನುಭವಿಸಿರುವನೋ, ಏನನ್ನು ತಿಳಿದುಕೊಂಡಿರುವನೊ ಅದನ್ನು ಕಾರ್ಯಗತಗೊಳಿಸಬಲ್ಲ ವ್ಯಕ್ತಿಯೂ ನಮಗೆ ಬೇಕು. ಇಂತಹ ಭಾವ, ಯುಕ್ತಿ ಮತ್ತು ಕ್ರಿಯಾಶೀಲತೆಯ ಸಾಮರಸ್ಯ ನಮಗೆ ಬೇಕು.'

( ಸ್ವಾಮಿ ವಿವೇಕಾನಂದ, ವ್ಯಕ್ತಿತ್ವ ನಿರ್ಮಾಣ, ಪು.೧೫.)

ಸಂ.

# ಯುವಕರಿಗೆ ಕರೆ

೧೯೨೧, ಜನವರಿ ೩೦ ರಂದು ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವ. ಮಹಾತ್ಮಾ ಗಾಂಧೀಜಿಯವರು, ಕಸ್ತೂರ್ ಬಾ, ಮೋತಿಲಾಲ್ ನೆಹ್ರು, ಮಹಮ್ಮದ್ ಆಲಿ ಮತ್ತು ಇತರರೊಡನೆ ಅನಿರೀಕ್ಷಿತವಾಗಿ ಮಠಕ್ಕೆ ಆಗಮಿಸಿದರು —ವಿವೇಕಾನಂದರಿಗೆ ತಮ್ಮ ಗೌರವವನ್ನು ಸಲ್ಲಿಸಲು.

ಮಹಾಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ಶಿವಾನಂದರು ಅತಿಥಿಗಳನ್ನು ಆದರದಿಂದ ಬರಮಾಡಿಕೊಂಡರು. ಅವರನ್ನು ದೇವಾಲಯಕ್ಕೆ ಕರೆದೊಯ್ಯಲಾಯಿತು. ಅನಂತರ ಸ್ವಾಮಿ ವಿವೇಕಾನಂದರು ವಾಸಿಸುತ್ತಿದ್ದ ಕೊಠಡಿಯನ್ನು ತೋರಿಸಲಾಯಿತು. ಅಷ್ಟೇ ಅಲ್ಲದೆ ಶ್ರೀರಾಮಕೃಷ್ಣರ ಅಸ್ಥಿ, ಅವರ ಹಾಸಿಗೆ ಮತ್ತು ಅವರು ಬಳಸುತ್ತಿದ್ದ ವಸ್ತುಗಳನ್ನು ತೋರಿಸಿದರು. ಗಾಂಧೀಜಿ ಭಕ್ತಿಪೂರ್ವಕವಾಗಿ ಎಲ್ಲವನ್ನೂ ನೋಡಿದರು.

ಅಂದು ಉತ್ಸವದ ಪ್ರಯುಕ್ತ ಮಠದ ಆವರಣದಲ್ಲಿ ಸಾವಿರಾರು ಜನ ನೆರೆದಿದ್ದರು. ಅವರೆಲ್ಲ ಗಾಂಧೀಜಿ ಮಾತನಾಡಬೇಕೆಂದು ಬಯಸಿದರು. ಗಾಂಧೀಜಿ ಮಠದ ಕಟ್ಟಡದ ವರಾಂಡದಲ್ಲಿ ನಿಂತು ಜನರನ್ನುದ್ದೇಶಿಸಿ ಹೇಳಿದರು:

'ನಾನು ಮಾತನಾಡುವುದಕ್ಕೆ ಇಲ್ಲಿಗೆ ಬರಲಿಲ್ಲ. ನಾನು ಅಸಹಕಾರ ಚಳುವಳಿಯ ಅಥವಾ ಖಾದಿಯ ಬಗ್ಗೆ ಮಾತನಾಡುವುದಿಲ್ಲ. ನಾನು ಬಂದಿರುವುದು ಸ್ವಾಮಿ ವಿವೇಕಾನಂದರ ಪುಣ್ಯಸ್ಮೃತಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು. ಇಂದು ಅವರ ಹುಟ್ಟುದಿನ. ನಾನು ಅವರ ಬರಹಗಳನ್ನು ಗಮನವಿಟ್ಟು ಅಧ್ಯಯನ ಮಾಡಿರುವೆನು. ಅದರ ಫಲವಾಗಿ ನನ್ನ ದೇಶಭಕ್ತಿ ಸಾವಿರ ಪಾಲು ಅಧಿಕವಾಗಿದೆ. ಇಲ್ಲಿಂದ ಬರಿಕೈಯಲ್ಲಿ ಹಿಂತಿರುಗಿ ಹೋಗಬೇಡಿರೆಂದು ಇಲ್ಲಿ ನೆರೆದಿರುವ ಯುವಕರಿಗೆ ಮನವಿ ಮಾಡಿಕೊಳ್ಳುತ್ತೇನೆ. ಇದು ವಿವೇಕಾನಂದರು ವಾಸಿಸಿದ, ತಮ್ಮ ಜೀವನ ತ್ಯಾಗಮಾಡಿದ ಸ್ಥಳ. ಇಲ್ಲಿಂದ ಸ್ಫೂರ್ತಿಯನ್ನು ತೆಗೆದುಕೊಂಡು ಹೋಗಬೇಕೆಂದು ನಾನು ಯುವಕರಿಗೆ ಕೇಳಿಕೊಳ್ಳುತ್ತೇನೆ. '

'ನಾನು ಸ್ವಾಮಿ ವಿವೇಕಾನಂದರ ಅನೇಕ ಗ್ರಂಥಗಳನ್ನು ಓದಿರುವೆ. ಅನೇಕ ರೀತಿಯಲ್ಲಿ ಅವರ ಆದರ್ಶಗಳೂ ನನ್ನ ಆದರ್ಶಗಳಾಗಿವೆ. ವಿವೇಕಾನಂದರು ಇಂದು ಜೀವಿಸಿದ್ದಿದ್ದರೆ ದೇಶವನ್ನು ಜಾಗೃತಗೊಳಿಸುವುದರಲ್ಲಿ ಮಹತ್‌ಸೇವೆಯನ್ನು ಸಲ್ಲಿಸುತ್ತಿದ್ದರು. ಆದರೆ ಅವರ ಸ್ಫೂರ್ತಿ ನಮ್ಮೊಂದಿಗಿದೆ. ನಾವು ಸ್ವಾತಂತ್ರ್ಯಕ್ಕಾಗಿ ನಮ್ಮ ಎಲ್ಲ ಶಕ್ತಿಯನ್ನೂ ಪ್ರಯೋಗಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನಾವು ನಮ್ಮ ದೇಶವನ್ನು ಪ್ರೀತಿಸಬೇಕು. ನಾವೆಲ್ಲರೂ ಒಮ್ಮನಸ್ಕರಾಗಬೇಕು.'

*